ಓ.ಎಸ್. ನಂ.115/2023ರಲ್ಲಿ
ಪಿ.ಡಬ್ಲ್ಯೂ-1(ಚಂದ್ರಶೇಖರಯ್ಯ)

ದಿನಾಂಕ 04-07-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ:-

ನಾನು ವಾದಿಯಾಗಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| ನಿಪಿ-1 | ದಿನಾಂಕ 21.01.1981ರ ಪಂಚಾಯಿತಿ ಪಾರಿಕತ್‌ನ ದೃಢೀಕೃತ ನಕಲು |
| ನಿಪಿ-2 | ಹಿಸ್ಸಾ ಮೋಜಿಣಿ ದಾಖಲೆಯ ದೃಢೀಕೃತ ನಕಲು |
| ನಿಪಿ-3 | ಪಕ್ಕಾ ಬುಕ್‌ನ ದೃಢೀಕೃತ ನಕಲು |
| ನಿಪಿ-4 | ಮ್ಯುಟೇಶನ್‌ನ ದೃಢೀಕೃತ ನಕಲು |
| ನಿಪಿ-5 | ಮ್ಯುಟೇಶನ್ (4 ಹಾಳೆಗಳು) |
| ನಿಪಿ-6 ರಿಂದ ನಿಪಿ-20 | ಗಣಕೀಕೃತ ಪಹಣಿಗಳು |
| ನಿಪಿ-21 | ಕೃಷಿ ಪಾಸ್ ಪುಸ್ತಕ |
| ನಿಪಿ-22 | ದಿನಾಂಕ 21.01.1980ರ ವಿಭಾಗ ಪತ್ರದ ಮೂಲ ಪ್ರತಿ |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-22 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿಗೊಳಿಸುವಂತೆ ಕೋರುತ್ತೇನೆ.

ಪಾಟೀ ಸವಾಲು:-

1ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ

ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.